

# ಬಣ್ಣದೋಕುಳಿ!

■ ಹನಮಂತ ಕೊಪ್ಪದ



ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಸುತ್ತಾಡುತ್ತಿದ್ದಾಗ ಪಕ್ಷಿಗಳ ಸಾಲಿನಲ್ಲಿ ಒಂದು ಪಕ್ಷಿ ಬಹಳ ಗಮನ ಸೆಳೆಯಿತು. ಯಾರೋ ಹೋಳಿ ಹಬ್ಬದ ದಿನ ಆ ಪಕ್ಷಿಯ ಮೇಲೆ ಬಣ್ಣಗಳನ್ನು ಎರಚಿದ್ದಾರೋ ಎನ್ನುವಷ್ಟರ ಮಟ್ಟಿಗೆ ರಂಗುರಂಗಾಗಿದ್ದ ಆ ಹಕ್ಕಿಯ ಹೆಸರು ಕಾಮನಬಿಲ್ಲಿನ ಗಿಳಿ. ಇಂಗ್ಲಿಷ್‌ನಲ್ಲಿ ರೇನ್‌ಬೋ ಲೋರಿಕೇಟ್ ಎನ್ನುತ್ತಾರೆ. ಆಸ್ಟ್ರೇಲಿಯಾದಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಈ ಪಕ್ಷಿ ಗಿಳಿಯ ಕುಟುಂಬ ಹಾಗೂ ಲೋರಿ ಉಪಕುಟುಂಬಕ್ಕೆ ಸೇರಿದೆ. ತನ್ನ ಮೈಮೇಲಿನ ವರ್ಣರಂಜಿತ ಗಾಢಬಣ್ಣಕ್ಕೆ ಹೆಸರುವಾಸಿಯಾಗಿದೆ.

ಸಾಮಾನ್ಯವಾಗಿ 2ರಿಂದ 30 ಸೆ.ಮೀ. ಉದ್ದ ಹೊಂದಿರುವ ಈ ಗಿಳಿ, 120 ರಿಂದ 140 ಗ್ರಾಂ ತೂಕವಿರುತ್ತದೆ. ಕಿತ್ತಲೆ ಮಿಶ್ರಿತ ಕೆಂಪು ಬಣ್ಣದ ಕೊಕ್ಕು, ಹಸಿರು ಹಾಗೂ ಹಳದಿ ಮಿಶ್ರಿತ ನೀಲಿ ಬಣ್ಣದ ತಲೆ. ಎದೆಯ ಭಾಗವು ನೀಲಿ, ಕಪ್ಪು ಮಿಶ್ರಿತ ಕೆಂಪು ಬಣ್ಣದಿಂದ ಕೂಡಿದ್ದು, ದೇಹದ ಉಳಿದ ಭಾಗ ಗಾಢ ಹಸಿರು ಬಣ್ಣದ್ದು. ಮರಿಯಾಗಿರುವಾಗ ಹಕ್ಕಿಯ ಕೊಕ್ಕು ಕಪ್ಪು ಬಣ್ಣದಲ್ಲಿದ್ದು ಪ್ರೌಢಾವಸ್ಥೆಗೆ ಬರುತ್ತಿದ್ದಂತೆಯೇ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಗಂಡು ಮತ್ತು ಹೆಣ್ಣು ಹಕ್ಕಿಗಳ ನಡುವಣ ವ್ಯತ್ಯಾಸ ಗುರುತಿಸುವುದು ಕಷ್ಟ.

ತುಂಬಾ ಗದ್ದಲದ ಧ್ವನಿ ಮಾಡುವುದರಿಂದ ಕಾಡಿನಲ್ಲಿ ಇವುಗಳ ಇರುವಿಕೆಯನ್ನು ಗುರುತಿಸುವುದು ಸುಲಭ. ಮಳೆಕಾಡು, ತೆರೆದ ಕಾಡು, ಭೂಶಿರ, ಒಳನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹೂಗಳು, ಪರಾಗ, ಮಕರಂದ, ಹಸಿರು ಎಲೆಗಳು, ಚಿಕ್ಕ ಕಾಯಿಗಳು, ಹಣ್ಣುಗಳು, ಕಾಳುಗಳು ಇದರ ಆಹಾರ. ಕಾಮನಬಿಲ್ಲಿನ ಗಿಳಿಯು ಸರಿಸುಮಾರು 20 ವರ್ಷ ಬದುಕುತ್ತದೆ. ಜೀವಿತದ ಬಹುತೇಕ ಸಮಯವನ್ನು ಮರದಲ್ಲಿಯೇ ಕಳೆಯುತ್ತವೆ. ಇತರ ಪ್ರದೇಶಗಳಿಗೆ ವಲಸೆ ಹೋಗುವುದು ತುಂಬಾ ಕಡಿಮೆ.

ತನ್ನ ಚಿತ್ತಾಕರ್ಷಕ ಬಣ್ಣಗಳಿಂದ ಜನಸ್ನೇಹಿಯಾಗಿರುವ ಈ ಹಕ್ಕಿಯನ್ನು ಮನೆಯಲ್ಲಿ ಸಾಕುವವರಿದ್ದಾರೆ. ಈ ಹಕ್ಕಿಯ ಹಲವು ಪ್ರಬೇಧಗಳು ಈಗ ಅಳಿವಿನಂಚಿನಲ್ಲಿವೆ. ಆದರೆ ಆಸ್ಟ್ರೇಲಿಯಾದಲ್ಲಿ ಇವುಗಳ ಸಂಖ್ಯೆ ಹೆಚ್ಚುತ್ತಿರುವುದೇ ಸಮಸ್ಯೆ ಉಂಟು ಮಾಡಿದೆ. ರೈತರ ಹೊಲಗದ್ದೆಗಳಿಗೆ ಲಗ್ಗೆ ಇಡುವ ಈ ಗಿಳಿಗಳು ಅಪಾರ ಪ್ರಮಾಣದ ಬೆಳೆಯ ನಾಶಕ್ಕೆ ಕಾರಣವಾಗುತ್ತಿದ್ದು, ಸರ್ಕಾರವು ‘ಕೃಷಿಗೆ ಹಾನಿಕಾರಕ ಪಕ್ಷಿ’ ಎಂದು ಪ್ರಕಟಿಸಿ, ಇವುಗಳ ಸಂಖ್ಯೆಯ ನಿಯಂತ್ರಣಕ್ಕೆ ಕ್ರಮ ಕೈಗೊಂಡಿದೆ.